cover ಮಾಡುತ್ತದೆ, ಅವುಗಳನ್ನು ಬೇಗ ಮುಗಿಸಬೇಕೆನ್ನುವುದು ಅವರ ಒತ್ತಾಯ. ಅದನ್ನು ಈ 13 ಮತ್ತು 14ನೇ ತಾರೀಖಿಗೆ ನಾವು ಬೆಂಗಳೂರಿನಲ್ಲಿ ಸಭೆ ನಡೆಸಿ ಸೂಕ್ತವಾದ ನಿರ್ದೇಶನ ಕೊಡುತ್ತೇನೆ.

ಅಧ್ಯಕ್ಷರು: ಓ.ಕೆ. ಆಮೇಲೆ ಎಸ್.ಆರ್. ಮಹೇಶ್ ರವರ ಪ್ರಶ್ನೆ.

ದೈಹಿಕ ಶಿಕ್ಷಕರನ್ನು ನೇಮಿಸುವುದು

114(2385); ಶ್ರೀ ಮಹೇಶ್ ಎಸ್.ಆರ್. (ಕೃಷ್ಣರಾಜ ನಗರ)

ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಕಾಲೇಜುಗಳಿಗೆ ದೈಹಿಕ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು;

ಇ) ಈಗಲಾದರೂ ಸದರಿ ಕಾಲೇಜುಗಳಿಗೆ ದೈಹಿಕ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮಕೈಗೊಳ್ಳಲಾಗುವುದೇ?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಸರ್ಕಾರದ ಆದೇಶ ಸಂಖ್ಯೆ: ಇಡಿ 95 ಯೋಯೋಕ 2007 ದಿನಾಂಕ:30/08/2007ರನ್ವಯ 500ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 15 ದೈಹಿಕ ಶಿಕ್ಷಣ ಹುದ್ದೆಗಳನ್ನು ಸೃಜಿಸಲಾಗಿದೆ ಹಾಗೂ ಈಗಾಗಲೇ ಇದ್ದ 05 ದೈಹಿಕ ಶಿಕ್ಷಕರ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 35 ಡಿಜಿಓ 2009 ದಿನಾಂಕ:18/05/2013ರಲ್ಲಿ ದೈಹಿಕ ಶಿಕ್ಷಣ ಉಪನ್ಯಾಸಕರ ವೃಂದದ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಇ) ಮಂಜೂರಾಗಿರುವ 20 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳಿಗೆ ನೇಮಕಾತಿ ಕಾರ್ಯವಿಧಾನ ನಿಗಧಿಯಾಗಿರದ ಕಾರಣ ಈ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರಲಿಲ್ಲ. ಪ್ರಸ್ತುತ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ದಿನಾಂಕ:29.05.2014 ರಿಂದ ಜಾರಿಗೆ ಬಂದಿರುತ್ತದೆ. ಅದರನ್ವಯ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು 50:50 ರ ಅನುಪಾತದಲ್ಲಿ ನೇರನೇಮಕಾತಿ ಮತ್ತು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿದೆ, ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಿಕೊಳ್ಳಲಾಗುವುದು.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಎಸ್.ಆರ್. ಮಹೇಶ್ ರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ, ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಯೋಗ ಬೇರೆ ಮಾಡಬೇಕೆಂದು ಸರ್ಕಾರದಿಂದ ನಿರ್ಣಯ ತೆಗೆದುಕೊಂಡಿದ್ದೀರಿ. ರಾಷ್ಟ್ರ ವ್ಯಾಪಿ ಮಾಡುತ್ತಿದ್ದೀರಿ. ಇಲ್ಲಿ ಹುಡುಗರಿಗೆ ಯೋಗ ಹೇಳಿಕೊಡುವುದಕ್ಕೆ ಅವರಿಗೆ ಡ್ರಿಲ್ ಮಾಡಿಸುವುದಕ್ಕೆ ಮಾಸ್ಟರ್‌ಗಳು ಇಲ್ಲದಿದ್ದರೆ ಯಾವ ರೀತಿ ಸಾಧ್ಯವಾಗುತ್ತದೆ? ಅದನ್ನು ಆದಷ್ಟು ಬೇಗ ಜಾಗ್ರತೆಯಾಗಿ ಮೂಡಿಸಿದರೆ ಇದು ಆರೋಗ್ಯಕ್ಕೆ ಬಹಳ ಒಳ್ಳೆಯದು. ಆ ದೃಷ್ಟಿಯಿಂದ ಯಾವ ಶಿಕ್ಷಕರಿಲ್ಲದಿದ್ದರೂ ಪರವಾಗಿಲ್ಲ, ದೈಹಿಕ ಶಿಕ್ಷಕರನ್ನು ನೇಮಿಸಬೇಕು.

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕ್ರಮ ತೆಗೆದುಕೊಂಡಿದ್ದೇವೆ. ಈಗ approve ಆಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಕ್ರಮ ತೆಗೆದುಕೊಂಡಿದ್ದಾರೆ. ಬಹಳ ಸಂತೋಷ.

ಶ್ರೀ ವೈ.ಎಸ್.ವಿ. ದತ್ತಾ: ಸಚಿವರೆ, ಸೇರಿಸಿ ಹೇಳಿಬಿಡಿ. ಏಕೆಂದರೆ ವಯೋಮಿತಿ ಮೀರುತ್ತಿದೆ. ಅವರೆಲ್ಲ C. PEd ಮಾಡಿಕೊಂಡಿದ್ದಾರಲ್ಲ, ದೈಹಿಕ ಶಿಕ್ಷಣ ಪಡೆದುಕೊಂಡವರಿಗೆ ಇದುವರೆಗೆ ನೇಮಕ ಮಾಡಿಕೊಳ್ಳದವರಿಗೆ age bar ಆಗುತ್ತಿದೆ. ವಯೋಮಿತಿ ಮೀರುತ್ತಿದೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ದತ್ತಾರವರು ಕೇಳುತ್ತಿರುವುದು ಬೇರೆ. ಅವರು ಕೇಳುವುದು ಏನಿದೆ. ಪದವಿ ಪೂರ್ವ ಕಾಲೇಜಿನಲ್ಲಿ 20 vacancies ಏನಿತ್ತು, ಅದು approve ಆಗಿದೆ, ಸದ್ಯದಲ್ಲಿಯೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ನೇಮಕ ಮಾಡುವುದಕ್ಕೆ.

ಶ್ರೀ ಕಿಮ್ಮನೆ ರತ್ನಾಕರ್:– ಹೌದು ಸರ್.

ಅಧ್ಯಕ್ಷರು: ಓ.ಕೆ. ಸಚಿವರೆ ಒಂದು ಕೆಲಸ ಮಾಡಿ. ನೀವು application ಕರೆದು interview ಮಾಡಿ ಮಾಡುವುದಕ್ಕಿಂತ merit basis ಮೇಲೆ ಮಾಡಿ ಬಿಸಾಕಿ. ಈಗ ರಾಜೀವ್ ಪಿ. ರವರ ಪ್ರಶ್ನೆ.

RMSA ಯೋಜನೆಯಡಿಯಲ್ಲಿ ಶಾಲೆಯ ಪ್ರಾರಂಭ

115(1726); ಶ್ರೀ ರಾಜೀವ್ ಪಿ. (ಕುಡಚಿ)

ಅ) ರಾಜ್ಯದಲ್ಲಿ 2015–16ನೇ ಸಾಲಿಗೆ RMSA ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಹೊಸದಾಗಿ ಪ್ರೌಢಶಾಲೆಗಳಿಗೆ ಮಂಜೂರು ಮಾಡುವ ಪ್ರಸ್ತಾವನೆ ಇದೆಯೇ;

ಆ) ಕುಡುಚಿ ಮತ ಕ್ಷೇತ್ರದ ಶೈಕ್ಷಣಿಕವಾಗಿ ಹಿಂದುಳಿದಿರುವ ಕ್ಷೇತ್ರವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, 2015–16ನೇ ಸಾಲಿನಲ್ಲಿ ಕುಡುಚಿ ಕ್ಷೇತ್ರಕ್ಕೆ ಸದರಿ ಯೋಜನೆ ಅಡಿಯಲ್ಲಿ ಹೊಸದಾಗಿ ಪ್ರೌಢಶಾಲೆಗೆ ಮಂಜೂರಾತಿ ನೀಡಲಾಗುವುದೇ;